# ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ : ೧೯೧೫

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೮೬೭
http://www.kasapa.in e-mail : kannadaparishattu@gmail.com


ಕ್ರಮಸಂಖ್ಯೆ : ಕಸಾಪ / ದತ್ತಿ ಕಾರ್ಯಕ್ರಮ / ೨೦೨೧–೨೨ ದಿನಾಂಕ : ೨೨–೦೨–೨೦೨೨

ಇವರಿಗೆ

ಸಂಪಾದಕರು / ಮುಖ್ಯ ವರದಿಗಾರರು
........................................ಬೆಂಗಳೂರು

ಮಾನ್ಯರೆ,

**ಪತ್ರಿಕಾ ಹೇಳಿಕೆ – ಪ್ರಕಟಣೆ ಕೃಪೆಗಾಗಿ**

## ‘ಡಾ. ಎಚ್. ವಿಶ್ವನಾಥ್ ಮತ್ತು ಎಂ.ಎಸ್. ಇಂದಿರಾ ದತ್ತಿ ಪ್ರಶಸ್ತಿ’

**ತುಮಕೂರು ಜಿಲ್ಲೆಯ ದೃಷ್ಟಿ ವಿಕಲ ಚೇತನ ಸಾಹಿತಿಗಳಾದ ಶ್ರೀ ಮುದಿಗೆರೆ ರಮೇಶ್ ಕುಮಾರ್**

ಅವರು ರಚಿಸಿರುವ **‘ಬಟಬಯಲು’** ಕವನ ಸಂಕಲನ ಕೃತಿಗೆ

**ಡಾ. ಎಚ್. ವಿಶ್ವನಾಥ್ ಮತ್ತು ಎಂ.ಎಸ್. ಇಂದಿರಾ** ಅವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ, **‘ಡಾ. ಎಚ್. ವಿಶ್ವನಾಥ್** ಮತ್ತು **ಎಂ.ಎಸ್. ಇಂದಿರಾ’** ಎಂಬ ಹೆಸರಿನಲ್ಲಿ, ಕರ್ನಾಟಕದಲ್ಲಿ ದೃಷ್ಟಿ ವಿಕಲ ಚೇತನ ಲೇಖಕರಿಗೆ ಮೀಸಲಾದ **ಮೊದಲ ದತ್ತಿ ಪ್ರಶಸ್ತಿ**ಯನ್ನು ಸ್ಥಾಪಿಸಿರುತ್ತಾರೆ. ದಾನಿಗಳ ಆಶಯದಂತೆ, **ದಿನಾಂಕ ೮–೨–೨೦೨೨** ರಂದು **ನಾಡೋಜ ಡಾ. ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ** ನಡೆದ ಆಯ್ಕೆ ಸಮಿತಿ ಸಭೆಯಲ್ಲಿ **ಮೊದಲ ಬಾರಿಗೆ “ಡಾ. ಎಚ್. ವಿಶ್ವನಾಥ್** ಮತ್ತು ಎಂ.ಎಸ್. ಇಂದಿರಾ **ದತ್ತಿ ಪ್ರಶಸ್ತಿ”**ಗೆ ದೃಷ್ಟಿ ವಿಕಲ ಚೇತನ ಶ್ರೀ **ಮುದಿಗೆರೆ ರಮೇಶ್ ಕುಮಾರ್,** ತುಮಕೂರು ಅವರು ರಚಿಸಿರುವ **‘ಬಟಬಯಲು’** ಎಂಬ ಕವನ ಸಂಕಲನ ಕೃತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪ್ರಶಸ್ತಿಯ ಮೊತ್ತ **ರೂ. ೧೦,೦೦೦ (ಹತ್ತು ಸಾವಿರ ಮಾತ್ರ)** ನಗದು. ಇದರ ಜೊತೆಗೆ ಸ್ಮರಣಿಕೆ ಹಾಗೂ ಫಲ ತಾಂಬೂಲಗಳನ್ನೂ ಒಳಗೊಂಡಿರುತ್ತದೆ.

**ಶ್ರೀಯುತ ಮುದಿಗೆರೆ ರಮೇಶ್ ಕುಮಾರ್ ಅವರು** ಮುದಿಗೆರೆ ಗ್ರಾಮ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆಯವರು, ಬೆಂಗಳೂರಿನ ವಿಶ್ವವಿದ್ಯಾನಿಲಯದ ಐದು ವರ್ಷಗಳ ಕಾನೂನು ಪದವಿ ಪಡೆದು, ಬೆಂಗಳೂರಿನ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸೂರ್ಯನ ರಾತ್ರಿಗಳು, ಎದೆಯ ಪುಟಗಳು, ಬಟಬಯಲು ಇವರ ಸ್ವತಂತ್ರ ಕೃತಿಗಳಾಗಿದ್ದು, ಶ್ರಮ ಶೃಂಗಾ, ತಮದೊಡಲ ಜೀವಗಳು, ಚಂದ್ರೋದಯ ಇವುಗಳು ಸಂಪಾದಿತ ಕೃತಿಗಳಾಗಿವೆ. ೨೦೦೬– ಶಿವಮೊಗ್ಗ, ೨೦೧೫–ಶ್ರವಣಬೆಳಗೊಳ ಹಾಗೂ ೨೦೧೯–ಧಾರವಾಡದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳಲ್ಲಿ ರಾಜ್ಯಮಟ್ಟದ ಕವಿಗೋಷ್ಠಿಯ ಭಾಗವಹಿಸಿದ್ದಾರೆ. ೨೦೧೮ರಲ್ಲಿ ಮೈಸೂರಿನಲ್ಲಿ ನಡೆದ ದಸರಾ ಕವಿಗೋಷ್ಠಿ, ಇಂತಹ ಪ್ರಧಾನ ಕವಿಗೋಷ್ಠಿಗಲ್ಲಿ ಅನೇಕ ರಾಜ್ಯಮಟ್ಟದ ಕವಿಗೋಷ್ಠಿಗಳಲ್ಲಿ, ಬಾನುಲಿ ಹಾಗೂ ದೂರದರ್ಶನ ಕವಿಗೋಷ್ಠಿಗಳಲ್ಲಿ ಮತ್ತು ವಿಚಾರ ಸಂಕೀರ್ಣಗಳು, ಸಮನ್ವಯ ಕವಿಗೋಷ್ಠಿಗಳು, ಮಾಧ್ಯಮಗಳ ಮೂಲಕ ಜಾಗೃತಿ, ಹೋರಾಟ ಮತ್ತು ಪ್ರತಿಭಟನೆಯಲ್ಲಿ ಪಾಲ್ಗೊಂಡಿರುತ್ತಾರೆ. ಸಾಹಿತ್ಯ, ಪತ್ರಿಕೋದ್ಯಮ ಹಾಗೂ ಸಂಘಟನೆಗಳು ಇವರ ಆಸಕ್ತಿಯ ಕ್ಷೇತ್ರಗಳಾಗಿವೆ.

ಆಯ್ಕೆ ಸಮಿತಿಯ ಸಭೆಯಲ್ಲಿ ಸರ್ವಾನುಮತದಿಂದ ಇವರನ್ನು ಆಯ್ಕೆ ಮಾಡಲಾಯಿತು. ಸದಸ್ಯರಾದ **ಡಾ. ಎಚ್. ವಿಶ್ವನಾಥ್,** ಪ್ರಕಟಣಾ ವಿಭಾಗದ ಸಂಚಾಲಕರಾದ **ಶ್ರೀ ಕೆ. ರಾಜಕುಮಾರ್,** ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ **ಶ್ರೀ ನೇ. ಭ ರಾಮಲಿಂಗಶೆಟ್ಟಿ,** ಗೌರವ ಕೋಶಾಧ್ಯಕ್ಷರಾದ **ಶ್ರೀ ಬಿ.ಎಂ. ಪಟೇಲ್‌ಪಾಂಡು** ಅವರುಗಳು ಉಪಸ್ಥಿತರಿದ್ದರು.

**(ನೇ.ಭ. ರಾಮಲಿಂಗಶೆಟ್ಟಿ)**
ಗೌರವ ಕಾರ್ಯದರ್ಶಿಗಳು

ದಯವಿಟ್ಟು ಇದನ್ನು ರಾಜ್ಯಮಟ್ಟದ ಸುದ್ದಿಯಾಗಿ ಪ್ರಕಟಿಸಲು ಕೋರಿದೆ.